ಓ ಎಸ್ ನಂಃ 320-20
ಪಿ ಡಬ್ಲ್ಯೂ ಃ 1

ದಿಃ 18-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಎ ಕೆ ಹೆಚ್ ವಕೀಲರಿಂದ

21. ನಾನು 10 ನೇ ತರಗತಿ ಮಾಗಡಿ ಹೈಸ್ಕೂಲ್‌ನಲ್ಲಿ ಓದಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ ಆಂಗ್ಲ ಭಾಷೆ ಅಷ್ಟೊಂದು ಬರುವುದಿಲ್ಲ. ನಾನು ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡಿದ್ದು, ನಂತರ ಕಂದಾಯ ರಾಜಸ್ವನಿರೀಕ್ಷಕರಾಗಿ ಕೆಲಸ ಮಾಡಿದ್ದೇನೆ. ನಾನು ಆನೇಕಲ್ ತಾಲ್ಲೂಕು, ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ. ನಾನು ಕೆಲಸಕ್ಕೆ ದಿನಾಂಕಃ 13-05-1975 ರಂದು ಸೇರಿರುತ್ತೇನೆ. ನಾನು ಮೊದಲಿಗೆ ಕನಕಪುರ ತಾಲ್ಲೂಕಿನಲ್ಲಿ ಸೇವೆ ಸಲ್ಲಿಸಿದ್ದೆ. ನಾನು ಅಕ್ಟೋಬರ್ 2006 ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿರುತ್ತೇನೆ. ನಾನು ನಿವೃತ್ತಿ ಹೊಂದುವಾಗ ಬೆಂಗಳೂರು ಡಿ ಸಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದೆ. ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ವಾದಪತ್ರದಲ್ಲಿ ಹೇಳಿದ ಎಲ್ಲಾ ಅಂಶಗಳು ನನಗೆ ಚೆನ್ನಾಗಿ ಗೊತ್ತಿದೆ.

22. ನನ್ನ ತಂದೆ ಹನುಮಂತಪ್ಪರವರು ದಿನಾಂಕಃ 22-05-1995 ರಂದು ತೀರಿಕೊಂಡಿರುತ್ತಾರೆ. ನನ್ನ ಸ್ವಂತ ತಾಯಿಯ ಹೆಸರು ನರಸಮ್ಮ ಆಗಿದ್ದು ಅವರು ನಾನು 10 ವರ್ಷದ ಹುಡುಗನಾಗಿದ್ದಾಗ ತೀರಿಕೊಂಡಿರುತ್ತಾರೆ. ನರಸಮ್ಮರವರು ತೀರಿಕೊಂಡ ನಂತರ ನನ್ನ ತಂದೆ ಅಮ್ಮಯಮ್ಮರವರನ್ನು ಮದುವೆಯಾಗಿರುತ್ತಾರೆ. ನನ್ನ ತಂದೆ ಹಾಗೂ ನರಸಮ್ಮರವರಿಗೆ ನಾನು, ನನ್ನ ಅಕ್ಕ ಕೆಂಪಮ್ಮ ಮತ್ತು ನನ್ನ ತಮ್ಮ ಹನುಮಂತಯ್ಯ ಮಕ್ಕಳು ಇರುತ್ತಾರೆ. ಕೆಂಪಮ್ಮರವರನ್ನು ಮಾಗಡಿ ತಾಲ್ಲೂಕಿನ ಕೋರಮಂಗಲ ಊರಿನವರಿಗೆ ಕೊಟ್ಟು ಮದುವೆ ಮಾಡಿರುತ್ತೇನೆ. ಕೆಂಪಮ್ಮರವರ ಗಂಡನ ಹೆಸರು ಕೆ ಎನ್ ಮೂರ್ತಿ ಎಂದರೆ ನಿಜ. ಕೆಂಪಮ್ಮರವರು 2018 ರಲ್ಲಿ ತೀರಿಕೊಂಡಿರುತ್ತಾರೆ. ಅಮ್ಮಯಮ್ಮರವರಿಗೆ ಸುಗುಣಮ್ಮ ಮತ್ತು 1 ನೇ ಪ್ರತಿವಾದಿ ಮಕ್ಕಳು ಆಗಿರುತ್ತಾರೆ. ಕೆಂಪಮ್ಮರವರ ಗಂಡ ಕೆ ಎನ್ ಮೂರ್ತಿರವರು ಸುಮಾರು ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಕೆಂಪಮ್ಮ ಹಾಗೂ ಸುಗುಣರವರ ಮದುವೆ ನನ್ನ ತಂದೆಯ ಜೀವಿತಾವಧಿಯಲ್ಲಿಯಾಗಿರುತ್ತದೆ. ಕೆಂಪಮ್ಮ ಹಾಗೂ ಸುಗಣರವರು ತಮ್ಮ ತಮ್ಮ ಗಂಡಂದಿರ ಮನೆಯಲ್ಲಿ ಇದ್ದರು ಎಂದರೆ ನಿಜ. ಅದೇ ರೀತಿ ನಾನು ಸರ್ಕಾರಿ ಕೆಲಸದಲ್ಲಿದ್ದಿದ್ದರಿಂದ ಸರ್ಕಾರ ನನ್ನನ್ನು ಎಲ್ಲಿಗೆ ವರ್ಗಾವಣೆ ಮಾಡುತ್ತಿತ್ತು ಅಲ್ಲಿ ಇರುತ್ತಿದ್ದೆ ಎಂದರೆ ನಿಜ. ನಾನು ಕಂದಾಯ ಇಲಾಖೆಯಲ್ಲಿ ಕೆಲಸ ಮಾಡಿದ್ದರಿಂದ ನನಗೆ ದಾವಾ ಆಸ್ತಿಗಳ ಖಾತೆ ಪಹಣಿ ಮತ್ತು ಅವುಗಳಿಗೆ ಸಂಬಂದಿಸಿದ ಕಾನೂನಾತ್ಮಕ ವಿಷಯಗಳ ಬಗ್ಗೆ ಗೊತ್ತಿದೆ ಎಂದರೆ ನಿಜ.

23. ನಾನು ಒಟ್ಟು ಐದಾರು ಆಸ್ತಿಗಳ ಮೇಲೆ ಈ ದಾವೆಯನ್ನು ಹೂಡಿರುತ್ತೇನೆ. ನಾನು ಈ ದಾವೆಯನ್ನು ಎಷ್ಟು ಆಸ್ತಿಗಳ ಮೇಲೆ ಹೂಡಿರುತ್ತೇನೆ ನಿಖರವಾಗಿ ಗೊತ್ತಿಲ್ಲ. ದಾವಾ ಆಸ್ತಿಗಳ ಸರ್ವೆ ನಂ 76/2, 76/4, 75/1, 75/2, ಇದ್ದು ಉಳಿದ ದಾವಾ ಆಸ್ತಿಗಳ ಸರ್ವೆ ನಂಬರ್ ನೆನಪಿಲ್ಲ. ಸರ್ವೆ ನಂ 75/1 ಮತ್ತು 75/2 ಕ್ಕೆ ನಾನು ಈ ದಾವೆಯನ್ನು ಹೂಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಮತ್ತು ಪ್ರತಿವಾದಿಗಳ ಕುಟುಂಬದ ಮೂಲಪುರುಷ ಮುದ್ದಹನುಮಯ್ಯ ಎಂದರೆ ನಿಜ. ಮುದ್ದಹನುಮಯ್ಯರವರ ಹೆಂಡತಿಯ ಹೆಸರು ತಿಮ್ಮಕ್ಕ ಎಂದರೆ ನಿಜ. ಮುದ್ದಹನುಮಯ್ಯ ಹಾಗೂ ತಿಮ್ಮಕ್ಕರವರಿಗೆ ಆರು ಜನ ಮಕ್ಕಳು ಅವರು ಬೈರೇಗೌಡ, ಕೆಂಪೇಗೌಡ, ಆಂಜಿನಪ್ಪ, ತಮ್ಮಣ್ಣಗೌಡ, ದೊಡ್ಡಪುಟ್ಟೇಗೌಡ ಮತ್ತು ಚಿಕ್ಕಪುಟ್ಟೇಗೌಡ ಎಂದರೆ ನಿಜ. ನನ್ನ ತಂದೆ ಹನುಮಂತಪ್ಪರವರು ಮುದ್ದಹನುಮಯ್ಯರವರ 2 ನೇ ಮಗ ಕೆಂಪೇಗೌಡರವರ ಮಗ ಎಂದರೆ ನಿಜ. ಮುದ್ದಹನುಮಯ್ಯ ಹಾಗೂ ತಿಮ್ಮಕ್ಕರವರು ಯಾವಾಗ ತೀರಿಕೊಂಡಿರುತ್ತಾರೆ ಗೊತ್ತಿಲ್ಲ. ನನ್ನ ಅಜ್ಜ ಕೆಂಪೇಗೌಡರು ನನ್ನ ತಂದೆ ಮೂರು ವರ್ಷದ ಮಗು ಆಗಿದ್ದಾಗ ತೀರಿಕೊಂಡಿದ್ದು ಕೆಂಪೇಗೌಡರ ಸಹೋದರರು ಯಾವಾಗ ತೀರಿಕೊಂಡಿರುತ್ತಾರೆ ಗೊತ್ತಿಲ್ಲ. ಮುದ್ದಹನುಮಯ್ಯರವರ ಮಕ್ಕಳು ಪ್ರತ್ಯೇಕವಾಗಿ ಸಂಸಾರ ಮಾಡುತ್ತಾ ಬಂದಿದ್ದರು ಎಂದರೆ ಸರಿಯಲ್ಲ. ಮುದ್ದಹನುಮಯ್ಯರವರ ಮಕ್ಕಳ ವಾರಸುದಾರರು ಈಗ ಒಟ್ಟಿಗೆ ಇರುವುದಿಲ್ಲ. ನನ್ನ ತಂದೆ ಹೇಳುತ್ತಿದ್ದ ಪ್ರಕಾರ ಮಕ್ಕಳು ಕಿತ್ತಾಡುತ್ತಾರೆಂದು ಆಂಜಿನಪ್ಪರವರೇ ಜುಬಾನಿ ವಿಭಾಗ ಮಾಡಿ ಭಾಗವನ್ನು ತಮ್ಮ ಸಹೋದರರಿಗೆ ಕೊಟ್ಟಿದ್ದರು. ಮುದ್ದಹನುಮಯ್ಯರವರ ಆರು ಜನ ಮಕ್ಕಳಲ್ಲಿ ಆಂಜಿನಪ್ಪ ಬುದ್ಧಿವಂತ ಮತ್ತು ವ್ಯವಹಾರಸ್ಥ ಎಂದರೆ ನಿಜ. ಮುದ್ದಹನುಮಯ್ಯರವರು ತೀರಿಕೊಂಡ ನಂತರ ಒಟ್ಟು ಕುಟುಂಬದ ಆಸ್ತಿಗಳ ಖಾತೆ ಆಂಜಿನಪ್ಪರವರ ಹೆಸರಿಗೆ ವರ್ಗಾವಣೆಯಾಗಿತ್ತು ಎಂದರೆ ನಿಜ. ಆಂಜಿನಪ್ಪರವರು ತೀರಿಕೊಂಡ ನಂತರ ಒಟ್ಟು ಕುಟುಂಬದ ಆಸ್ತಿಗಳು ಅವರ ಮಗ ಎ. ರಾಮಚಂದ್ರಯ್ಯರವರ ಹೆಸರಿಗೆ ಫವತಿ ಖಾತೆಯ ಮೂಲಕ ವರ್ಗಾವಣೆಯಾಗಿರುತ್ತದೆ. ಆಂಜಿನಪ್ಪರವರು ಒಟ್ಟು ಕುಟುಂಬದ ಆಸ್ತಿಗಳನ್ನು ತಮ್ಮ ಸಹೋದರರಿಗೆ ಭಾಗ ಮಾಡಿಕೊಟ್ಟ ಮೇಲೂ ಒಟ್ಟು ಕುಟುಂಬದ ಆಸ್ತಿಗಳ ಖಾತೆ ಆಂಜಿನಪ್ಪರವರ ಹೆಸರಿನಲ್ಲಿದ್ದು ಅವರು ತೀರಿಕೊಂಡ ನಂತರ ಅವರ ಮಗ ಎ. ರಾಮಚಂದ್ರಯ್ಯರವರ ಹೆಸರಿಗೆ ಆಗಿರುತ್ತವೆ ಎಂದರೆ ಸರಿಯಲ್ಲ.

25. ಭಾಗದಲ್ಲಿ ನನ್ನ ತಂದೆ ಹನುಮಂತಯ್ಯರವರಿಗೆ ನೇತೇನಹಳ್ಳಿ, ಉಳುವೆಗೆರೆ ಮತ್ತು ತಿಮ್ಮಸಂದ್ರದಲ್ಲಿ ಜಮೀನುಗಳು ಬಂದಿದ್ದವು ಎಂದರೆ ನಿಜ. ತಿಮ್ಮಸಂದ್ರದಲ್ಲಿ ಭಾಗ ಬಂದಿದೆ ಎಂದು ಹೇಳುವ ಜಮೀನಿನ ಸರ್ವೆ ನಂಬರ್ 51 ಆಗಿರುತ್ತದೆ. ಸರ್ವೆ ನಂ 51 ರ ವಿಸ್ತೀರ್ಣ 3 ಎಕರೆ 25 ಗುಂಟೆ ಆಗಿರುತ್ತದೆ. ನನ್ನ ಹೆಂಡತಿಯ ಹೆಸರು ಸುಶೀಲಮ್ಮ ಆಗಿರುತ್ತದೆ, ಮಕ್ಕಳ ಹೆಸರು ವೇದವತಿ,

ಕೃಷ್ಣಮೂರ್ತಿ ಮತ್ತು ನೇತ್ರಾವತಿ ಆಗಿರುತ್ತದೆ. ನನ್ನ ಮದುವೆ ನನ್ನ ತಂದೆ ಜೀವಿತಾವಧಿಯಲ್ಲಿಯಾಗಿರುತ್ತದೆ. 1 ಮತ್ತು 2ನೇ ಪ್ರತಿವಾದಿಗಳ ಮದುವೆ ನನ್ನ ತಂದೆಯ ಜೀವಿತಾವಧಿಯಲ್ಲಿಯಾಗಿರುತ್ತದೆ. ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ತಮ್ಮ ಮೊದಲನೇ ಮತ್ತು ಎರಡನೇ ಹೆಂಡತಿ ಮಕ್ಕಳ ಮದ್ಯೆ ವೈಮನಸ್ಸು ಬರಬಾರದೆಂದು ಆಶಿಸುತ್ತಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಂದೆ ತಮ್ಮ ಹೆಂಡತಿರ ಮಕ್ಕಳು ಆಸ್ತಿಗಾಗಿ ಜಗಳವಾಡಬೇಕೆಂದು ಬಯಸಿರಲಿಲ್ಲ. ಕೆಂಪಮ್ಮ ಹಾಗೂ ಸುಗುಣಮ್ಮರವರು ಭಾಗ ಬೇಕು ಎಂದು ನನ್ನ ತಂದೆಯನ್ನು ಕೇಳಿರುವುದಿಲ್ಲ. ಅದೇ ರೀತಿ ನಾವು ಗಂಡು ಮಕ್ಕಳು ನನ್ನ ತಂದೆಯನ್ನು ಭಾಗ ಬೇಕು ಎಂದು ಕೇಳಿರುವುದಿಲ್ಲ. ನನ್ನ ಹೆಂಡತಿ ಮಕ್ಕಳು ಈಗಲೂ ಸಹ ನನ್ನ ಜೊತೆ ಇರುತ್ತಾರೆ. ಈಗ ನಾನು ಮತ್ತು ನನ್ನ ಹೆಂಡತಿ ಪ್ರತ್ಯೇಕವಾಗಿ ವಾಸವಿದ್ದೇವೆ. ನನ್ನ ತಂದೆ ತಮ್ಮ ಹೆಂಡತಿಯರ ಮಕ್ಕಳ ಮದ್ಯೆ ವೈಮನಸ್ಸು ಬರಬಾರದೆಂದು 1ನೇ ಹೆಂಡತಿ ಮಕ್ಕಳಿಗೆ ತಿಮ್ಮಸಂದ್ರ ಗ್ರಾಮದ ಜಮೀನುಗಳು ಮತ್ತು ಮನೆ ಹಾಗೂ 2ನೇ ಹೆಂಡತಿ ಮಕ್ಕಳಿಗೆ ನೇತೇನಹಳ್ಳಿ ಮತ್ತು ಉಳುವೆಗೆರೆ ಗ್ರಾಮದ ಜಮೀನುಗಳು ಹಾಗೂ ಮನೆಯನ್ನು ಭಾಗ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ.

26. ತಿಮ್ಮಸಂದ್ರದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಒಂದು ಮನೆ ಇತ್ತು ಎಂದರೆ ನಿಜ. ಆ ಮನೆ ನನ್ನ ತಂದೆಯ ಹೆಸರಿನಲ್ಲಿತ್ತು ಎಂದರೆ ನಿಜ. ಆ ಮನೆಯ ಖಾತೆಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ನಿಜ. ಆ ಮನೆಯ ಖಾತೆ ಬದಲಾವಣೆಯನ್ನು ನನ್ನ ಹೆಸರಿಗೆ ಮಾಡಿಕೊಳ್ಳಲು ಪ್ರತಿವಾದಿಗಳು ತೊಂದರೆ ಕೊಟ್ಟಿಲ್ಲ. ಆ ಮನೆ ಭಾಗದಲ್ಲಿ ನನಗೆ ಬಂದಿದ್ದರಿಂದ ಆ ಮನೆಯ ಖಾತೆ ಬದಲಾವಣೆಯನ್ನು ನನ್ನ ಹೆಸರಿಗೆ ಮಾಡಿಕೊಳ್ಳಲು ಪ್ರತಿವಾದಿಗಳು ತೊಂದರೆ ಕೊಡಲಿಲ್ಲ ಎಂದರೆ ಸರಿಯಲ್ಲ. ನಿಪಿ 19 ರ ಮನೆಯ ಖಾತೆ ನನ್ನ ಹೆಸರಿಗೆ ಆದ ನಂತರ ಅದರ ವಿರುದ್ದ ಪ್ರತಿವಾದಿಗಳು ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ನಿಜ. ನಿಪಿ 18ರಂತೆ ನೇತೇನಹಳ್ಳಿ ಗ್ರಾಮದಲ್ಲಿರುವ ಮನೆ ಅಮ್ಮಯಮ್ಮರವರ ಹೆಸರಿಗೆ ಬರುತ್ತಿದೆ ಎಂದರೆ ನಿಜ. ಅಮ್ಮಯಮ್ಮರವರ ಹೆಸರಿಗೆ ಆದ ಖಾತೆ ಬದಲಾವಣೆಯನ್ನು ನಾನು ಪ್ರಶ್ನೆ ಮಾಡಿದ್ದೆ. ಈ ವಿಷಯಕ್ಕೆ ಸಂಬಂದಿಸಿದಂತೆ ನನ್ನ ಸ್ವಂತ ಸಹೋದರ ಸಹೋದರಿಯರು ಪ್ರಶ್ನೆ ಮಾಡಿರುವುದಿಲ್ಲ. ನೇತೇನಹಳ್ಳಿ ಗ್ರಾಮದಲ್ಲಿರುವ ಮನೆಯನ್ನು ನನ್ನ ತಂದೆ ಜುಬಾನೆ ವಿಭಾಗದ ಮೂಲಕ ಅಮ್ಮಯಮ್ಮರವರಿಗೆ ಕೊಟ್ಟಿದ್ದರಿಂದ ನನ್ನ ಸ್ವಂತ ಸಹೋದರ ಸಹೋದರಿಯರು ಖಾತೆ ಬದಲಾವಣೆಯನ್ನು ಪ್ರಶ್ನೆ ಮಾಡಿಲ್ಲ ಎಂದರೆ ನನ್ನ ತರೆ ಜುಬಾನೆ ವಿಭಾಗ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ನೇತೇನಹಳ್ಳಿ ಗ್ರಾಮದ ಮನೆಯ ಖಾತೆಯ ಬದಲಾವಣೆಗೆ ತಕರಾರು ಸಲ್ಲಿಸಿರುವುದಾಗಿ ನಾನು ಹೇಳಿದ್ದು ಆ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ. ಯೋಗನಂದಕುಮಾರ್ ರವರಿಗೆ ಆಸ್ತಿ ಮಾರಾಟ ಆದ ವಿಷಯವನ್ನು ನಾನು ನನ್ನ ವಾದಪತ್ರದಲ್ಲಿ

ಹೇಳಿಲ್ಲ. ಯೋಗನಂದಕುಮಾರ್ ರವರಗೆ ಆದ ಕ್ರಯಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ, ಸಾಕ್ಷಿ ಮುಂದುವರೆದು ನನ್ನ ತಮ್ಮ 1ನೇ ಪ್ರತಿವಾದಿ ಕ್ರಯಪತ್ರಕ್ಕೆ ಸಹಿಮಾಡಬೇಕೆಂದು ಕೇಳಿಕೊಂಡಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಯೋಗನಂದಕುಮಾರ್ ರವರಿಗೆ ಆದ ಕ್ರಯಪತ್ರಕ್ಕೆ ಸಂಬಂದಿಸಿದಂತೆ ಕ್ರಯದ ಹಣವನ್ನು 1ನೇ ಪ್ರತಿವಾದಿ ಪಡೆದಿರುತ್ತಾರೆ. ನೇತೇನಹಳ್ಳಿ ಗ್ರಾಮದ ಮನೆ ಅಮ್ಮಯಮ್ಮ ಹಾಗೂ ಅವರ ಮಕ್ಕಳಿಗೆ ಬಂದಿದ್ದರಿಂದ ಅವರು ಆ ಆಸ್ತಿಯನ್ನು ಮಾರಾಟ ಮಾಡಿ ಹಣ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಯೋಗನಂದಕುಮಾರ್ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಕ್ರಯಪತ್ರವನ್ನು ನಾನೇ ಸಹಿ ಮಾಡಿಕೊಟ್ಟಿದ್ದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಹೇಳುತ್ತಾರೆ. ಆದ ಕಾರಣ ಆ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಮಾರಾಟ ಮಾಡಿದ್ದರಿಂದ ಸೇರಿಸಿಲ್ಲ ಎಂದು ಹೇಳುತ್ತಾರೆ. ಈ ಎಲ್ಲಾ ವಿಷಯಗಳನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಮತ್ತು ಪ್ರತಿವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಈಗ ಎಂ ಆರ್ ನಂ 2/1995-96ರ ಮ್ಯುಟೇಷನ್ ದಾಖಲೆಯನ್ನು ತೋರಿಸಲಾಗಿ ಅದರಂತೆ ಸರ್ವೆ ನಂ 51 ರಲ್ಲಿ 3 ಎಕರೆ 25 ಗುಂಟೆ ನನ್ನ ಹೆಂಡತಿ ಮತ್ತು ತಮ್ಮನ ಹೆಸರಿಗೆ ಮ್ಯುಟೇಷನ್ ಬದಲಾವಣೆ ಆಗಿರುತ್ತದೆ ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ನಾನು ಅಮ್ಮಯಮ್ಮ ಹಾಗೂ 1ನೇ ಪ್ರತಿವಾದಿ ಒಪ್ಪಿ ನನ್ನ ಹೆಂಡತಿ ಮತ್ತು ನನ್ನ ಸ್ವಂತ ತಮ್ಮನ ಹೆಸರಿಗೆ ಮಾಡಿಸಿರುವ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ನಿಜ. ನಿಡಿ1ಕ್ಕೆ ಅಮ್ಮಯಮ್ಮ ಹಾಗೂ ಅವರ ಮಕ್ಕಳು ತೊಂದರೆ ಮಾಡಿರುವುದಿಲ್ಲ ಎಂದರೆ ನಿಜ. ನಿಡಿ1ನ್ನು ನಾನು ಸಹ ಪ್ರಶ್ನೆ ಮಾಡಿಲ್ಲ ಎಂದರೆ ನಿಜ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**